

# ಬಾಲಿವುಡ್‌ನ ಕೋವಿಡ್ ಕಥೆಗಳು

■ ವಿಶಾಖ ಎನ್.

ನಟ–ನಟಿಯರಿಗೆ ಕೋವಿಡ್ ಬರುವುದು ಕೂಡ ಬಗೆಬಗೆಯ ನಮೂನೆಯಲ್ಲಿ ಸುದ್ದಿಗೆ ಪಕ್ಕಾಗುತ್ತದೆ. ಅಮಿತಾಭ್ ಬಚ್ಚನ್‌ಗೆ ಕೋವಿಡ್ ದೃಢಪಟ್ಟಾಗ ಮಾಡಿದ ವಿಡಿಯೊ ವೈರಲ್ ಆಗಿತ್ತು. ಈಗ ರಣಬೀರ್ ಕಪೂರ್ ಕೋವಿಡ್ ಬಾಧಿತರಾಗಿದ್ದಾರೆ.

ತಾಯಿ ನೀತು ಮಗನಿಗೆ ಕೋವಿಡ್ ದೃಢಪಟ್ಟಿರುವುದನ್ನು ಜಾಹೀರುಗೊಳಿಸಿದರು. ತಕ್ಷಣಕ್ಕೆ ಪ್ರತಿಕ್ರಿಯಿಸಿದ್ದು ಆಲಿಯಾ ಭಟ್. ರಣಬೀರ್ ಜತೆ ಡೇಟಿಂಗ್ ಮಾಡುತ್ತಿರುವ ಆಲಿಯಾ ಇನ್‌ಸ್ಟಾಗ್ರಾಂನಲ್ಲಿ ಒಂದು ಸಂದೇಶದ ಪೋಸ್ಟ್ ಹಾಕಿದರು. ಅದು ಹೀಗಿದೆ: ‘ವಿ ಗ್ರೋ ಥ್ರೂ ವಾಟ್ ವಿ ಗೋ ಥ್ರೂ’ (ನಾವು ಏನೆಲ್ಲ ಅನುಭವಿಸುವೆವೋ ಅಂತೆಯೇ ಬೆಳೆಯುವೆವು). ‘ಬ್ರಹ್ಮಾಸ್ತ್ರ’ ಚಿತ್ರೀಕರಣದಲ್ಲಿ ರಣಬೀರ್ ಜತೆ ಆಲಿಯಾ ತೊಡಗಿಕೊಂಡಿದ್ದರು. ಅನಿವಾರ್ಯವಾಗಿ ಅವರೂ ಕೋವಿಡ್ ಟೆಸ್ಟ್ ಮಾಡಿಸಿಕೊಂಡರು. ಅವರ ವರದಿ ನೆಗೆಟಿವ್ ಎಂದು ಬಂತು. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ಆಲಿಯಾ ಕ್ವಾರಂಟೈನ್‌ನಲ್ಲಿ ಇದ್ದಾರೆ.

ಆಲಿಯಾ ನಾಯಕಿಯಾಗಿ ನಟಿಸಿರುವ ‘ಗಂಗೂಬಾಯಿ ಕಾಥಿಯಾವಾಡಿ’ ಸಿನಿಮಾದ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಅವರಿಗೂ ಕೋವಿಡ್ ಇರುವುದು ದೃಢಪಟ್ಟಿದೆ.

ಆಲಿಯಾ ಭಟ್ ತೊಡಗಿರುವ ಎರಡೆರಡು ಚಿತ್ರಗಳಲ್ಲಿ ತೊಡಗಿದವರಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿರುವುದು ಮತ್ತೆ ಕೋವಿಡ್ ವ್ಯಾಪಕವಾಗುತ್ತಿರುವುದರ ಸೂಚನೆ ಎಂದೂ ಕೆಲವರು ಹೇಳಿದ್ದಾರೆ. ಆದರೆ, ಎಚ್ಚರಿಕೆಯಿಂದ ಇದ್ದು, ಎಲ್ಲರೂ ಕೆಲಸಗಳನ್ನು ಮುಂದುವರಿಸಬೇಕಿದೆ ಎನ್ನುವ ಮೂಲಕ ಆಲಿಯಾ ‘ಅಂತಹ ಅಭಿಪ್ರಾಯಗಳು ಉತ್ಪ್ರೇಕ್ಷಿತ’ ಎಂದಿದ್ದಾರೆ.

ರಣಬೀರ್ ಸಿಂಗ್ ಆರೋಗ್ಯ ಸ್ಥಿರವಾಗಿದೆ. ಕೋವಿಡ್‌ನಿಂದ ಯಾವುದೇ ಗಂಭೀರ ಬದಲಾವಣೆಗಳು ಆಗಿಲ್ಲ ಎಂದು ಅವರ ತಾಯಿ ಹೇಳಿರುವುದು ಆಲಿಯಾಗೆ ಸಮಾಧಾನ ತಂದಿದೆ. ಪ್ರಿಯಕರ–ಪ್ರಿಯತಮೆ ಇಬ್ಬರೂ ಪರಸ್ಪರ ಮೊಬೈಲ್‌ನಲ್ಲಿ ಮಾತನಾಡುತ್ತಾ ಉಭಯಕುಶಲೋಪರಿಯಲ್ಲಿ ತೊಡಗಿದ್ದಾರೆ. ■

# ಜಾಹ್ನವಿ ಅಭಿಮಾನಿ ವೃಂದ

ಹೆಚ್ಚು ಸಿನಿಮಾಗಳು ತೆರೆಕಾಣದೆಯೂ ಸದಾ ಸುದ್ದಿಯಲ್ಲಿರುವ ಹೊಸಕಾಲದ ನಟಿಯರಲ್ಲಿ ಜಾಹ್ನವಿ ಕಪೂರ್ ಹೆಸರು ಮುಂಚೂಣಿಯಲ್ಲಿದೆ. ಮೂರು ಚಿತ್ರಗಳನ್ನು ಕೈಲಿಟ್ಟುಕೊಂಡಿರುವ ಅವರಿಗೀಗ 24ರ ಹರೆಯ. ಅಭಿಮಾನಿಗಳ ಬಗೆಗೆ ಈಗಲೇ ಅವರು ಉದ್ದುದ್ದ ಮಾತನಾಡುತ್ತಿರುವುದು ವಿಶೇಷ. ಅದಕ್ಕೆ ಇತ್ತೀಚಿನ ಘಟನೆಯೊಂದು ಕಾರಣ.

ವಿಮಾನ ನಿಲ್ದಾಣದಲ್ಲಿ ಜಾಹ್ನವಿ ಇತ್ತೀಚೆಗೆ ಹೊರಟಿದ್ದಾಗ ಅಭಿಮಾನಿಯೊಬ್ಬ ಸೆಲ್ಫಿ ಬಯಸಿ ಓಡೋಡಿ ಬಂದ. ಆಗ ನಟೀಮಣಿಯ ಬಾಡಿಗಾರ್ಡ್ ಒಬ್ಬ ತನ್ನ ಸಲಾಕೆಯಂಥ ಕೈಯನ್ನು ಅಡ್ಡ ಇಟ್ಟು ತಡೆದ. ಆ ಅಭಿಮಾನಿ ಸಂಕಟದಲ್ಲಿ ಮುಖ ಕಿವುಚಿದ. ಅದನ್ನು ಕಂಡು ಕರಗಿದ ಜಾಹ್ನವಿ, ತಾವೇ ಅಭಿಮಾನಿಯತ್ತ ಹೆಜ್ಜೆ ಹಾಕಿದರು. ಸೆಲ್ಫಿಗಾಗಿ ಪೋಸ್ ಕೊಟ್ಟು ಪರಿಸ್ಥಿತಿಯನ್ನು ನಿಭಾಯಿಸಿದರು.

ಹೀಗೇ ಎಷ್ಟು ಜನ ಅಭಿಮಾನಿಗಳನ್ನು ನಿಭಾಯಿಸಲು ಸಾಧ್ಯ ಎಂಬ ಪ್ರಶ್ನೆಗೆ ಅವರ ಉತ್ತರವಿದು: ‘ನಾನು 40 ವರ್ಷಗಳ ಹಿಂದೆ ಪಕ್ಕಾ ಅಭಿಮಾನಿಯಾಗಿ ಶಬಾನಾ ಆಜ್ಮಿ ಬಳಿಗೆ ಹೋಗಿದ್ದೆ. ಅವರು ನನ್ನನ್ನು ನಡೆಸಿಕೊಂಡ ರೀತಿ ಕಂಡು ಕರಗಿದ್ದೆ. ನನ್ನ ಅಮ್ಮನಿಗೂ ಸಾಕಷ್ಟು ಅಭಿಮಾನಿಗಳಿದ್ದರು. ಕೆಲವರಂತೂ ಹುಚ್ಚು ಅಭಿಮಾನಿಗಳು. ಅವರೆಲ್ಲರನ್ನೂ ಅವಳು ಚೆನ್ನಾಗೇ ನಿಭಾಯಿಸುತ್ತಿದ್ದಳು. ನಾನೂ ಅವರಿಂದ ಪಾಠ ಕಲಿತಿರುವೆ. ಈಗ ಎಲ್ಲರಿಗೂ ಫೋಟೊ ಹುಚ್ಚು. ಒಂಚೂರು ನಗು ಚೆಲ್ಲಿದರೆ ನಾವು ಕಳೆದುಕೊಳ್ಳುವುದು ಏನಿದೆ?’ ■

